ಆ) ಚಾಮರಾಜನಗರದ ಕೊತ್ತಲವಾಡಿ ಗ್ರಾಮದಲ್ಲಿ ಗ್ರಾನೈಟ್ ಸಿಡಿಮದ್ದಿನಿಂದ ಸತ್ತವರಿಗೆ ಪರಿಹಾರ ನೀಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ಇದೇ ಸದನದಲ್ಲಿ ನನ್ನ ಮತಕ್ಷೇತ್ರವಾದ ಚಾಮರಾಜನಗರದ ಕೊತ್ತಲವಾಡಿ ಗ್ರಾಮದಲ್ಲಿ ಗ್ರಾನೈಟ್ ಸಿಡಿಮದ್ದಿನಿಂದ ಆರು ಜನರು ಸತ್ತರು ಎಂಬ ವಿಷಯ ಚರ್ಚೆಯಾಗಿದೆ. ಸತ್ತ ನಂತರ ಇವತ್ತಿನವರೆಗೂ ಅದರ ಬಗ್ಗೆ ತನಿಖೆಯಾಗಲಿಲ್ಲ. ಇಷ್ಟು ಜನ ಸತ್ತ ನಂತರವೂ ಆ ಪ್ರದೇಶದಲ್ಲಿ ಗಣಿಗಾರಿಕೆ ನಿರಂತರವಾಗಿ ಆರಂಭವಾಗಿದೆ. ನಾನು ಏನು ಹೇಳುತ್ತಿದ್ದೇನೆಂದರೆ, ಇದಕ್ಕೆ ಲೈಸೆನ್ಸ್ ಕೊಡುವವರು ಯಾರು? ಯಾರಿಂದ ಅನುಮತಿ ಪಡೆಯಬೇಕು? ಎಲ್ಲ ವ್ಯವಸ್ಥೆಗಳಿಗೂ ಬೇರೆ ಬೇರೆ ಇಲಾಖೆಗಳಿವೆ. ಆದರೆ, ಇವರು ಅಲ್ಲಿರುವ ಯಾರೋ ಒಬ್ಬ Sub Inspector ಅನ್ನು ಸಸ್ಪೆಂಡ್ ಮಾಡಿದ್ದಾರೆ.. ಮಾನ್ಯ ಯಡಿಯೂರಪ್ಪನವರೆ, ಇದು ತಮಗೆ ಗೊತ್ತಿರಬೇಕು. ನಾನು ಇದರ ಬಗ್ಗೆ ಈ ಹಿಂದೆ ಹೇಳಿದ್ದೆ. ಅಲ್ಲಿ ಆರು ಜನ ಸತ್ತು ಹೋದರು. ಸತ್ತವರ ಬಗ್ಗೆ ಯಾವುದೇ ಚಿಂತನೆ ಇಲ್ಲ. ಅದರ ಬಗ್ಗೆ ಸಮಗ್ರವಾದ ತನಿಖೆಯಾಗಲಿಲ್ಲ. ಈಗಾಗಲೇ ಅಲ್ಲಿ ಮತ್ತೆ ಗಣಿಗಾರಿಕೆ ಶುರುವಾಗಿದೆ. ಇವತ್ತು ಬೆಳಗ್ಗೆಯಿಂದ ಅಲ್ಲಿ ಗಣಿಗಾರಿಕೆ ಶುರುವಾಗಿದೆ. ಒಂದು, ಇದರ ಬಗ್ಗೆ ತನಿಖೆಯಾಗಬೇಕು. ಎರಡು, ಪರಿಹಾರ ನೀಡಬೇಕು. ಮೂರು, ಅಲ್ಲಿ ಜರುಗುತ್ತಿರುವ ಗಣಿಗಾರಿಕೆಯನ್ನು ನೀವು ತಕ್ಷಣ ನಿಲ್ಲಿಸಬೇಕಾಗುತ್ತದೆ. ಅದು ಬಹಳ ಪ್ರಾಮುಖ್ಯವಾದುದು. ಇದನ್ನು ನಾನು ತಮಗೆ ಏತಕ್ಕೆ ಹೇಳುತತಿದ್ದೇನೆಂದರೆ, ಒಬ್ಬ ಅಮಾಯಕ Sub Inspectorಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧ ಬರುವುದಿಲ್ಲ. ಭೂ ವಿಜ್ಞಾನ ಇಲಾಖೆಯವರು, ಬೇರೆ ಬೇರೆ ಇಲಾಖೆಯವರು ಇದರ ಬಗ್ಗೆ ಸಮಂಜಸವಾಗಿ ತೀರ್ಮಾನ ಮಾಡಬೇಕು. ಇದನ್ನು ಮಾಡುವುದು ಬಿಟ್ಟು ಮತ್ತೆ ಗಣಿಗಾರಿಕೆ ಶುರು ಮಾಡಿರುವುದು ಸರಿಯಾದ ಕ್ರಮವಲ್ಲ. ಇದರ ಬಗ್ಗೆ ತೀವ್ರವಾದ ತನಿಖೆಯಾಗಬೇಕು. ಮತ್ತು ಸಿಡಿಮದ್ದು ಸ್ಫೋಟದಿಂದ ಸತ್ತಿರುವವರಿಗೆ ಪರಿಹಾರ ಕೊಡಬೇಕು. ಅಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ನಿಲ್ಲಿಸಬೇಕು.

ಶ್ರೀ ಹೆಚ್.ಎಸ್.ಮಹಾದೇವ ಪ್ರಸಾದ್ (ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕೊತ್ತಲವಾಡಿ ಗ್ರಾಮದಲ್ಲಿ ಗಣಿಗಾರಿಕೆ ಮಾಡುವ ಸಂದರ್ಭದಲ್ಲಿ ಸ್ಫೋಟಗೊಂಡು 6 ಜನ ಮೃತಪಟ್ಟಿರುವ ವಿಚಾರವನ್ನು ಈಗಾಗಲೇ ಸದನದಲ್ಲಿ ಪ್ರಸ್ತಾಪಿಸಿದ್ದಾರೆ. ಮಾನ್ಯ ಗೃಹ ಸಚಿವರು ಕೂಡ ಕಾನೂನು ರೀತ್ಯಾ ಕ್ರಮ ಕೈಗೊಂಡಿರುವ ವಿಚಾರವನ್ನು ತಿಳಿಸಿದ್ದಾರೆ. ಮತ್ತು ಸತ್ತವರ ಕುಟುಂಬಗಳಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರ ಈಗಾಗಲೇ ಘೋಷಿಸಿದೆ. ಈ ಘಟನೆಯಾದ ನಂತರ ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆಯ ಭಾಗದಲ್ಲಿ ಏನು ಗಣಿಗಾರಿಕೆ ನಡೆಯುತ್ತಿದೆ, ಅದನ್ನೆಲ್ಲಾ ಸಂಪೂರ್ಣವಾಗಿ ತಪಾಸಣೆಗೊಳಪಡಿಸಿ, ಅಲ್ಲಿನ ಸ್ಥಳವನ್ನು ಪರಿಶೀಲನೆ ಮಾಡಿ ಮತ್ತು ಅವರು ಯಾವ ಆಧಾರದಲ್ಲಿ ಗಣಿಗಾರಿಕೆ ಮಾಡುತ್ತಿದ್ದಾರೆ, ಯಾರಿಂದ ಅನುಮತಿ ಪಡೆದುಕೊಂಡಿದ್ದಾರೆ, blasting ಮಾಡುವುದಕ್ಕೆ ಏನೇನು ಕ್ರಮಗಳನ್ನು ಅನುಸರಿಸುತ್ತಿದ್ದಾರೆ, ಕಾರ್ಮಿಕರನ್ನು ನೇಮಿಸಿಕೊಳ್ಳುವುದರಲ್ಲಿ ಏನು procedure ಅಳವಡಿಸಿಕೊಂಡಿದ್ದಾರೆ, ಇವೆಲ್ಲವನ್ನೂ ತನಿಖೆ ಮಾಡುವುದಕ್ಕೆ ಮೂರು ತನಿಖಾ ತಂಡಗಳನ್ನು ಜಿಲ್ಲಾ ಮಟ್ಟದಲ್ಲಿ ನೇಮಕ ಮಾಡಲಾಗಿದೆ. 3 ಜನ ಕೆಎಎಸ್ ಅಧಿಕಾರಿಗಳು, 3 ಜನ ಡಿವೈಎಸ್‌ಪಿಗಳು, 3 ಜನ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ Deputy Directors, ಉನ್ನತ ಮಟ್ಟದ 3 ಜನ DFOs, ಈ ತರಹದಲ್ಲಿ ಮೂರು ತಂಡಗಳನ್ನು ರಚಿಸಿದ್ದೇವೆ. ಇಡೀ ಚಾಮರಾಜನಗರ ತಾಲ್ಲೂಕಿನಲ್ಲಿ, ಅಲ್ಲಿ ಗಣಿಗಾರಿಕೆ ಇವತ್ತಿನಂದೇನೂ ನಡೆಯುತ್ತಿಲ್ಲ. 1976ನೇ ಇಸವಿಯಿಂದಲೂ ಅಲ್ಲಿ ಗಣಿಗಾರಿಕೆ ನಡೆದುಕೊಂಡು ಬಂದಿದೆ. ಈ ಹಿಂದೆ ಈ ತರಹದ ಘಟನೆ ಯಾವುದೂ ಆಗಿಲ್ಲದೇ ಇರುವುದರಿಂದ, ಅದರ ಬಗ್ಗೆ ಸಮಗ್ರವಾಗಿ ಮಾಹಿತಿ ಸಂಗ್ರಹಿಸುವಂತಹ ಕೆಲಸ ಆಗಿರಲಿಲ್ಲ. ಸರ್ಕಾರಕ್ಕೆ ಇಲಾಖೆಯಿಂದ ಏನು ಮಾಹಿತಿ ಇತ್ತೋ, ಅಷ್ಟೇ ಆಧಾರದಲ್ಲಿ ಈ ಕಾರ್ಯ ಚಟುವಟಿಕೆಗಳು ನಡೆಯುತ್ತಾ ಬಂದಿತ್ತು. ಈಗ ಅಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಒಂದು ಸಮಗ್ರವಾಗಿ ಮಾಹಿತಿ ಸಂಗ್ರಹಿಸುವ ಮತ್ತು ತನಿಖೆ ಮಾಡುವ ತಂಡಗಳನ್ನು ನೇಮಕ ಮಾಡಲಾಗಿದ್ದು, ತನಿಖೆ ನಡೆಯುತ್ತಿದೆ. ಆವತ್ತಿನಿಂದ ಇವತ್ತಿನವರೆಗೂ

ಗಣಿಗಾರಿಕೆಯಿಂದ ಯಾವುದೇ ಒಂದು ಕಲ್ಲು ಕೂಡ ಹೊರಗಡೆಗೆ ಸರಬರಾಜು ಆಗುವುದಕ್ಕೆ ಅವಕಾಶ ಕೊಟ್ಟಿಲ್ಲ. ಚಾಮರಾಜನಗರ ತಾಲ್ಲೂಕಿನಲ್ಲಿ ಯಾವುದೇ ಗಣಿಗಾರಿಕೆ ನಡೆಯುತ್ತಿಲ್ಲ. ಇದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಆರು ಜನರು ಸತ್ತ ನಂತರವೂ ಆ ಸ್ಥಳದಲ್ಲೇ ನಾಲ್ಕು ಕಡೆಗಳಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಅದು ತಮ್ಮ ಗಮನಕ್ಕೆ ಬಂದಿಲ್ಲ. ಅಲ್ಲಿ ನಾಲ್ಕು ಕಡೆಗಳಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಅದು ಸರಿಯಲ್ಲ. ಸರಿಯಾದ ಕ್ರಮವಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಸದಸ್ಯರು ಪೂರ್ತಿ ಉತ್ತರ ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್: ನಾನು ಉತ್ತರ ಅವರನ್ನು ಕೇಳಿದ್ದು.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ನಾನೂ ಸರ್ಕಾರದಲ್ಲಿ ಸಚಿವನಾಗಿದ್ದೇನೆ. ಜಿಲ್ಲೆಯ ಉಸ್ತುವಾರಿ ಸಚಿವನಾಗಿ ನನಗೂ ಜವಾಬ್ದಾರಿ ಇದೆ.

ಶ್ರೀ ವಾಟಾಳ್ ನಾಗರಾಜ್: ನಾನು ಉಪಮುಖ್ಯಮಂತ್ರಿಗಳನ್ನು ಕೇಳಿದ್ದು. ನೀವು ಬಂದು, ನೀವು ಜಿಲ್ಲಾ ಸಚಿವರು ಶುರು ಮಾಡಿದರೆ ಹೇಗೆ?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ನಾವೂ ಸರ್ಕಾರ ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್: ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಏನು ಬೇಕಾದರೂ ಹೇಳಿ ನಮ್ಮದೇನೂ ಅಭ್ಯಂತರವಿಲ್ಲ, ಅವರ ಬಗ್ಗೆ ಗೌರವವಿದೆ.

ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಇದೆಲ್ಲಾ ಕೇಳುವುದಕ್ಕೆ ಅವಕಾಶವಿಲ್ಲ, ಅವರು ಆ ಜಿಲ್ಲೆಗೆ ಸಂಬಂಧಪಟ್ಟ ಹಿರಿಯ ಸಚಿವರು, ಅವರಿಗೂ ಮಾಹಿತಿ ಗೊತ್ತಿದೆ, ನೀವು ಇದ್ಯಾಕೆ ಹೀಗೆ ಮಾಡುತ್ತೀರಿ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಏನು ಕ್ರಮಕೈಗೊಳ್ಳಲಾಗಿದೆ ಎಂಬುದನ್ನು ಸದನಕ್ಕೆ ತಿಳಿಸುವುದು ನನ್ನ ಕರ್ತವ್ಯವಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಅದು ಅವರ ಕ್ಷೇತ್ರವಲ್ಲ, ನನಗೆ ಮತಕೊಟ್ಟಿರುವ ನನ್ನ ಮತದಾರರ ಕ್ಷೇತ್ರ, ಅದನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಅವರು ಆ ಜಿಲ್ಲೆಯ ಜಿಲ್ಲಾಮಂತ್ರಿಗಳು, ಸರ್ಕಾರದ ಪರವಾಗಿ ಉತ್ತರ ಕೊಡುತ್ತಾರೆ, ಈ ರೀತಿ ಮಾತನಾಡುತ್ತಾ ಹೋದರೆ, ಬೇರೆ ಬಿಸಿನೆಸ್ ಅನ್ನು ಯಾವಾಗ ತೆಗೆದುಕೊಳ್ಳುವುದು?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಾಹಿತಿಯನ್ನು ಸಕಾಲಕ್ಕೆ ನೀಡಿಲ್ಲವೆನ್ನುವ ಕಾರಣಕ್ಕೆ ಅಲ್ಲಿಯ ಒಬ್ಬ ಸಬ್ ಇನ್ಸ್‌ಪೆಕ್ಟರ್ ಮೇಲೆ ಕ್ರಮ ಕೈಗೊಂಡಿದ್ದಾರೆ, ಅದರ ಬಗ್ಗೆ ತನಿಖೆ ನಡೆಯುತ್ತಿದೆ, ತಪ್ಪಿತಸ್ಥರಲ್ಲವೆಂದರೆ...

(ಗೊಂದಲ)

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್ ಅವರೆ, ಈಗಾಗಲೇ ಚರ್ಚೆಯಾಗಿರುವ ವಿಷಯವನ್ನು ತೆಗೆದುಕೊಂಡು ಬಂದು ಸುಮ್ಮನೆ ಸದನದ ಸಮಯವನ್ನು ಈ ರೀತಿ ಹಾಳು ಮಾಡುವುದು ಸರಿಯಲ್ಲ. ಈಗಾಗಲೇ ಆ ಬಗ್ಗೆ ಗೃಹ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ತಾವು ಮತ್ತೆ ಏನೋ ಹೇಳಿದಿರಿ. ಆಯಿತು, ಸಂಬಂಧಪಟ್ಟ ಜಿಲ್ಲಾ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಅವರು ಸಂಬಂಧಪಟ್ಟ ಸಚಿವರಲ್ಲ, ಜಿಲ್ಲಾ ಸಚಿವರಷ್ಟೆ. ಅವರ ಬಗ್ಗೆ ನನಗೆ ಗೌರವವಿದೆ, ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ, ಒಳ್ಳೆಯ ಕತೆಯಾಯಿತಲ್ಲ ಸ್ವಾಮಿ?

ಅಧ್ಯಕ್ಷರು: ಸರ್ಕಾರವೆಂದರೆ, ಅವರು ತಾನೆ? ತಾವು ಹಿರಿಯರಾಗಿ ಏನು ಈ ತರಹ ಮಾತನಾಡುತ್ತಿದ್ದೀರಿ? ಸರ್ಕಾರವೆಂದರೆ ಅವರು ಸೇರುವುದಿಲ್ಲವೇ?

ಶ್ರೀ ವಾಟಾಳ್ ನಾಗರಾಜ್: ಅವರು ಗೃಹ ಖಾತೆ ಸಚಿವರಲ್ಲ, ಭೂ ವಿಜ್ಞಾನ ಇಲಾಖೆ ಸಚಿವರಲ್ಲ, ಅವರದು ಕನ್ನಡ ಮತ್ತು ಸಂಸ್ಕೃತಿ, ಜಾನಪದ ಇಲಾಖೆ, ಇವರಿಗೆ ಎತ್ತಣದಿಂದ ಎತ್ತ ಸಂಬಂಧ?

ಅಧ್ಯಕ್ಷರು: ಅವರು ಆ ಜಿಲ್ಲೆಯವರಲ್ಲವೇ? ಅವರಿಗೂ ಮಾಹಿತಿ ಗೊತ್ತಿರುತ್ತದೆ ಅಲ್ಲವೇ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ತಾವು (ವಾಟಾಳ್ ನಾಗರಾಜ್) ಏನು ಸೂಚನೆಯನ್ನು ಕೊಡುತ್ತಿರೋ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ನಾನು ಆ ಭಾಗದ ಸಚಿವನಾಗಿರುವುದರಿಂದ, ವಿಚಾರ ಗೊತ್ತಿರುವುದರಿಂದ ಆ ಬಗ್ಗೆ ಪ್ರಸ್ತಾಪಮಾಡಿದೆ.

ಅಧ್ಯಕ್ಷರು: ಆಯಿತು, ನಿಮಗೂ ಗೊತ್ತಿದೆ, ಅವರಿಗೂ ಗೊತ್ತಿದೆ, ಈಗ ಚರ್ಚೆಗೆ ಅವಕಾಶವಿಲ್ಲ.

ಶ್ರೀ ವಾಟಾಳ್ ನಾಗರಾಜ್: ಸರ್, ಈಗ ನಾನು ಮಾತನಾಡುವುದಕ್ಕೆ ಹೋದರೆ ತಾವು ಬಹಳ ಬೇಜಾರು ಮಾಡಿಕೊಳ್ಳುತ್ತೀರಿ, ನನಗೆ ನೋವಾಗಿದೆ, ಹೊರಗಡೆಗೆ ಹೋಗುತ್ತಿದ್ದೇನೆ, ಎಲ್ಲಾದರೂ ಉಂಟೇ? ಸತ್ತವರ ಬಗ್ಗೆ ಅನುಕಂಪವಿಲ್ಲ, ಯಾರೋ ಒಬ್ಬ ಅಮಾಯಕ ಸಬ್ ಇನ್ಸ್‌ಪೆಕ್ಟರ್ ಅನ್ನು ಅಮಾನತಿನಲ್ಲಿಡಲಾಗಿದೆ. ಅವರು ಜಿಲ್ಲಾ ಮಂತ್ರಿಗಳು, ಅವರಿಗೂ ಗಣಿಗೂ ಸಂಬಂಧವಿಲ್ಲ, ಅವರ ಬಗ್ಗೆ ನನಗೆ ಗೌರವವಿದೆ, ವಿಶ್ವಾಸವಿದೆ.

ಅಧ್ಯಕ್ಷರು : ಪರಿಹಾರ ಕೊಡುತ್ತಾರೆ, ತಮ್ಮ ಸ್ಥಾನಕ್ಕೆ ತೆರಳಿ, ತಾವು ತಮ್ಮ ಆಸನದಲ್ಲಿ ಕುಳಿತುಕೊಂಡರೆ ಉತ್ತರ ಸಿಗುತ್ತದೆ., ಸ್ವಾಮಿ.

ಇ) ವಿಷಯ: ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಅಲಾಳ ಗ್ರಾಮದ ದಲಿತ ರೈತನ ಅನುಮಾನಾಸ್ಪದ ಸಾವಿನ ಮತ್ತು ಆ ಪ್ರದೇಶದಲ್ಲಿ ನಿರಂತರವಾಗಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಎರಡು ತಿಂಗಳಿನಿಂದ ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಅಲಾಳ ಗ್ರಾಮದ ದಲಿತರ ಮೇಲೆ ದೌರ್ಜನ್ಯಗಳು ನಡೆದು ಬಂದ್, ಕೌಂಟರ್ ಬಂದ್‌ಗಳೆಲ್ಲಾ ಆಯಿತು. ಈ ಮಧ್ಯೆ 19ನೇ ತಾರೀಖು ಒಬ್ಬ ದಲಿತ ರೈತ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ಅನುಮಾನಾಸ್ಪದ ಸಾವು ಎಂದು ಅಲ್ಲಿ ಪ್ರತಿಭಟನೆ ನಡೆಯುತ್ತಿದೆ. ಕಳೆದ 2 ತಿಂಗಳಿಂದ ಘರ್ಷಣೆ